SATYAVADI Founded 1917 Regd. No. M. 1299

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 29 ಸಂಚಿಕೆ 11ನೆ] ಬುಧವಾರ 2—1—46 [ಬಿಡಿ ಪ್ರತಿ 3 ಪೈ

ಸಾಮಾಜದಲ್ಲಿ ಭಾರತಕ್ಕೆ ಸರಿಸಮಾನತೆ

ಲಂಡನ್ ಜ 1— ಭಾರತ ಮಂತ್ರಿ ಲಾರ್ಡ್ ಪೆಥಿಕ್ ಲಾರೆನ್ಸರು ಭಾರತಕ್ಕಾಗಿ ಮಾಡಿದ ಆಕಾಶವಾಣಿ ಭಾಷಣದಲ್ಲಿ— 1946 ನೇ ವರ್ಷವು ಭಾರತಕ್ಕೆ ಮುಖ್ಯ ವರ್ಷವಾಗಿದೆಯೆಂದೂ, ಭಾರತವು ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸರಿಸಮಾನಭಾಗಿಯಾಗಬೇಕೆಂಬುದೇ ತಮ್ಮ ಯೆಂದೂ, ಈ ಬಗ್ಗೆ ಏನೊಂದು ಪ್ರತಿಭಟನೆಯಾಗಲೀ, ಒತ್ತಾಯವಾಗಲೀ ಅವಶ್ಯಕವಿಲ್ಲವೆಂದೂ ತಿಳಿಸಿರುವರು.

ಚುಂಕಿಂಗ್ ಡಿ 31— ಎರಡು ಸರಕಾರ, ಎರಡು ಸೈನ್ಯಗಳು ಅತಿ ಅಪಾಯಕರವೆಂದು ಚಿಯಾಂಗರು ಚೈನಾಕ್ಕೆ ಎಚ್ಚರಿಕೆ ಇತ್ತಿರುವರು.

ಸಿಲೋನಿನಲ್ಲಿ ಅಕ್ಕಿ ರೇಷನ್ ಡಿಸೆಂಬರ್ 26 ರಿಂದ 1 ಪಕ್ಷದವರೆಗೆ ಅರ್ಧಕ್ಕಿಳಿಸಿರುವರು.

ನವ ದೆಹಲಿ ಜ 1 — ಅಸೆಂಬ್ಲಿ ಕಟ್ಟಡದ ಹತ್ತಿರದ ಚೌಕದಲ್ಲಿರುವ ಇರ್ವಿನ್ ಸ್ಮಾರ್ಕ ಜೂವನ್ನು ವಿಕಾರಗೊಳಿಸಿರುವರು. ಆದರ ತಲೆಯ ಮೇಲೆ ಸೋಲಾ ಟೋಪಿಯನ್ನು ಹಾಕಿ ಅದರ ಚಕ್ಕಳವನ್ನು ಮೂಗಿನ ಹತ್ತಿರ ಕಟ್ಟಿ, ಕಸೂಡಿಗೆ ತುದಿಯನ್ನು ಕೆಂಪು ರಿಬ್ಬನ್ನಿಂದ ಕತ್ತಿಗೆ ಕಟ್ಟಿದಾರೆ. ಕೈಗಳ ಹತ್ತಿರ ಎರಡು ಗುಳುಗಳನ್ನಿಟ್ಟಿದ್ದಾರೆ. 15 ಅಡಿ ಎತ್ತರದ ಸ್ಮಾರ್ಕ ಜೂವಿಗೆ ಯಾರಿಗೂ ಗೊತ್ತಾಗದಂತೆ ಈ ರೀತಿ ಯಾರು ಮಾಡಿರಬೇಕು?

ಸೇಲಂ ಡಿ 29— ಅತ್ತೂರಿನ ವರ್ತಕರಾದ ಶ್ರೀ ಕೆ. ಜೆ. ವೀರಣ್ಣಶೆಟ್ಟರು ಜುಲೈ ತಿಂಗಳಲ್ಲಿ ಸಕ್ಕರೆಯನ್ನು ನಿಗದಿ ಖರೀದಿಗಿಂತ ಹೆಚ್ಚು ಬೆಲೆಗೆ ಮಾರಿದ್ದಕ್ಕಾಗಿ 1500 ರೂ. ಜುಲ್ಮಾನೆ ವಿಧಿಸಲಾಯಿತು.

ಟೋಕಿಯೋ. ಜ 1— ಜಪಾನ್ ಚಕ್ರವರ್ತಿ ಹಿರೋಹಿಟೋರವರು ತಾವು ದೈವಾಂಶಸಂಭೂತರೆಂದ ಹೇಳಿಕೆಯನ್ನು ನಿರಾಕರಿಸಿದರು.

ಉಡಯಪುರ ಡಿ 31— ಸಂಸ್ಥಾನಗಳ ಪ್ರಜಾ ಸಮ್ಮೇಳನದ 7 ನೇ ಅಧಿವೇಶನವು ಸಂ || ನೆಹರೂರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಗಿದೆ

ನ್ಯೂರೆಂಬರ್ಗ್ ಡಿ 31— ಇಲ್ಲಿ ಸಿಕ್ಕಿರುವ ಹಿಟ್ಲರಿನ ಉಯಿಲಿನಲ್ಲಿ ಮತ್ತೆ ನಾಜಿಜಂ ಹುಟ್ಟುವುದೆಂದು ಹಿಟ್ಲರಿನ ಕೋರಿಕೆಯಾಗಿದೆ.

ಅಶಕ್ತತೆಯನ್ನು ತೊಲಗಿಸಿ, ಭೀಮ, ಝಾನ್ಸಿ ರಾಣಿಯಂಥ ಭಾರತ ಪ್ರಜೆಗಳನ್ನು ಒದಗಿಸಬೇಕು ಎಂದು ಭಾಷಣ ಮಾಡಿದರು.

— ನೇ || ಆದ್ಯ ಅನಂತಾಚಾರ್ಯರು ಶ್ರೀ ಧನ್ವಂತರಿ ಧ್ವಜಾರೋಹಣವನ್ನು ನಡೆಸುತ್ತಾ ಶ್ರೀಕೃಷ್ಣ ಜನ್ಮಸ್ಥಾನವಾದ ಉಡುಪಿಯ ಒಳಯರುವ ಮಣಿಪಳದಲ್ಲಿ ಶ್ರೀ ಧನ್ವಂತರಿಯು ಅವತರಿಸಲೆಂದು ಆಶಿಸಿ ಭಾಷಣಮಾಡಿದರು.

ಅಖಿಲ ಭಾರತ ಆಯುರ್ವೇದ ಕಾಂಗ್ರೆಸ್ ಸಮ್ಮೇಳನ

(ಅ. ಸು.) ಮಣಿವಾಳ ಡಿ 29

ಈ ದಿವಸ ಅ. ಭಾ. ಆಯುರ್ವೇದ ಕಾಂಗ್ರೆಸ್ ಸಮ್ಮೇಳನವು ಶ್ರೀ ಬಾಬು ರಾಜೇಂದ್ರ ಪ್ರಸಾದರ ಸ್ಮೃತಿಯಲ್ಲಿ ನಿರ್ಮಿತವಾದ ಭವ್ಯ ಮಂಟಪದಲ್ಲಿ ಪ್ರಾರಂಭವಾಯಿತು. ಶ್ರೀ ಆರೂರು ಲಕ್ಷ್ಮೀನಾರಾಯಣರಾಯರು ಸ್ವಾಗತ ಭಾಷಣ ಮಾಡಿದರು. ಶ್ರೀ ಕವಿರಾಜ ಎಂ. ಕೆ ಮುಖರ್ಜಿಯವರು ಅಧ್ಯಕ್ಷತೆ ವಹಿಸಿದ್ದರು. ಅಧ್ಯಕ್ಷರಿಗೆ ಕುದುರೆ ಗಾಡಿಯಲ್ಲಿ ಮೆರವಣಿಗೆ ನಡೆಯಿತು.

— ತುಂಗಭದ್ರೆಯ ಪ್ರೇಮ ವಿದ್ಯಾಪೀಠದ ದಿ || ಸಂ || ತಾರಾನಾಥರ ಭಾವಚಿತ್ರ ಅನಾವರಣೋತ್ಸವವನ್ನು ಶ್ರೀ ಖಾಕ್ ಸಾಹೇಬ್ ಹುಸೇನ್ ಸಾಹೇಬರು ನಡೆಸಿದರು. ಶ್ರೀ ತಾರಾನಾಥರ ಸೇವೆಯನ್ನು ಪ್ರಶಂಸಿಸಿ ಅನೇಕರು ಭಾಷಣ ಮಾಡಿದರು.

— ಆಯುರ್ವೇದ ಸಮ್ಮೇಳನ ನಡೆಯುವ ಮಂಟಪಕ್ಕೆ ತಾರಾನಾಥ ವಿಹಾರವೆಂದು ಹೆಸರಿಡಲಾಗಿದೆ.

— ಅ || ಭಾ || ಆ || ವಸ್ತುಪ್ರದರ್ಶನ ಆರಂಭೋತ್ಸವವನ್ನು ತಿರುಚನಾಪಳ್ಳಿಯ ಶ್ರೀ ನಟರಾಜ ಶಾಸ್ತ್ರಿಗಳು ನೆರವೇರಿಸಿದರು

— ಉಡುಪಿಯ ಶಿರೂರು ಮಠದ ಶ್ರೀ ಲಕ್ಷ್ಮೀಂದ್ರ ತೀರ್ಥ ಶ್ರೀ ಪಾದಂಗಳವರು ಮತ್ತು ಮಂಗಳೂರಿನ ಲಾರ್ಡ್ ಬಿಷಪ್ ಶ್ರೀ ರೆ || ಡಾ || ಎ. ಆರ್. ಫರ್ನಾಂಡೀಸ್‌ರವರೂ ಶ್ರೀ ಟಿ. ಅನಂತಪೈರವರ ಮನೆಯಲ್ಲಿ ಭೇಟಿ ಮಾಡಿದರು. ಉಭಯಶ್ರೀಯರೂ ಸಮ್ಮೇಳನದಲ್ಲಿ ಅಮೋಘ ಭಾಷಣ ಮಾಡಿದರು.

— ಅ || ಭಾ || ಆ || ಪತ್ರಿಕಾಕಾರರ ಸಮ್ಮೇಳನವು ಕವಿರಾಜ ಆಶುತೋಷ ಮುಜಂದಾರರ ಅಧ್ಯಕ್ಷತೆಯಲ್ಲಿ ನಡೆಯಿತು. ಆಯುರ್ವೇದ ಪತ್ರಿಕೋದ್ಯೋಗದ ಅಭಿವೃದ್ಧಿ ವಿಷಯದಲ್ಲಿ ಚರ್ಚೆಗಳು ನಡೆದವು.

— ಆಯುರ್ವೇದ ವೈದ್ಯರುಗಳ ಔಷಧಿ ಚಿಕಿತ್ಸೆ ಆರಂಭಿಸುವುದಕ್ಕೆ ಮುಂಚೆ ಆಯುರ್ವೇದ ಮುಖ್ಯ ಮಂತ್ರವಾದ ಯೋಗ ವ್ಯಾಯಾಮವನ್ನು ಅಭ್ಯಸಿಸಬೇಕೆಂದು ಮದ್ರಾಸಿನ ಡಾ || ಲಕ್ಷ್ಮಿಪತಿಯವರು ಅಮೋಘ ಭಾಷಣ ಮಾಡಿದರು

— ಶ್ರೀ ಯೋಗರಾಜ ನರಸಿಂಹರಾವ್ ರವರು, ಭಾರತ ಸ್ತ್ರೀಪುರುಷರು ಇಂದಿನ

ಹೊಸ ವರ್ಷದ ಬಿರುದು

ಚಕ್ರವರ್ತಿಯವರು ದಯಪಾಲಿಸಿರುವ ಬಿರುದುಗಳ ಪೈಕಿ ಬ್ರಿಟಿಷ್ ಮಾಜಿ ಮಹಾಪ್ರಧಾನರಾದ ಮಿ | ರ್ಚರ್ಚಿಲ್ಲರಿಗೆ 'ಆರ್ಡರ್ ಆಫ್ ಮೆರಿಟ್' ಬಿರುದು ದೊರೆತಿದೆ.

ಹೈದರಾಬಾದು ನೈಜಾಮರಿಗೆ ರಾಯಲ್ ವಿಕ್ಟೋರಿಯಾ ಚೈನ್ ದೊರೆತಿದೆ.

ನಮ್ಮ ಶ್ರೀಮನ್ಮಹಾರಾಜರವರಿಗೆ ಜಿ. ಸಿ. ಬಿ. ಬಿರುದು ಪ್ರಶಸ್ತಿ ದೊರೆಕಿರುವುದಕ್ಕಾಗಿ ಅವರಿಗೆ ನಮ್ಮ ರಾಜಭಕ್ತಿಯುತವಾದ ಅಭಿನಂದನೆಗಳು.

ನಮ್ಮ ಶ್ರೀಮಹಾರಾಜರವರ ಪ್ರೈವೆಟ್ ಸೆಕ್ರೆಟರಿಯವರಿಗೆ 'ನೈಟ್‌ಹುಡ್' ದೊರೆದು ದೊಂತಿರುವದಕ್ಕಾಗಿ ಅವರಿಗೆ ನಮ್ಮ ಹೃತ್ಪೂರ್ವಕವಾದ ಅಭಿನಂದನೆಗಳು.

ಪ್ರಾತಿನಿಧ್ಯವಿಲ್ಲದಿದ್ದರಿ ತೆರಿಗೆಯೂ ಇಲ್ಲ.

ಕೆಲ್ಕತ್ತಾ ಡಿ 8— 'ಕೇಂದ್ರಸಭೆಯು ಜುನಾವಣೆಗಳು ಕೃತಿಮ' 'ಜನಸಾಮಾನ್ಯರಿಗೆ ಪ್ರಾತಿನಿಧ್ಯ ಕೊಡದಿದ್ದರೆ ಅವರ ಮೇಲೆ ತೆರಿಗೆ ವಿಧಿಸುವ ಅಧಿಕಾರವೂ ಇಲ್ಲ.'— ಹೀಗೆಂದು ಇಲ್ಲಿ ರೆಡಿಕಲ್ ಪಕ್ಷ ಮತ್ತು ಲೇಬರ ಫೆಡರೇಷನ್ ಆಶ್ರಯದಲ್ಲಿ ನಡೆದ ಬಹಿರಂಗ ಸಭೆಯಲ್ಲಿ 30000 ಜನರಿರ್ಣಯಿಸಿದರು. (ಬಿ)

ಸೇವಕರ ಮುಷ್ಕರಕ್ಕೆ ವಿದ್ಯಾರ್ಥಿ ಕಾಂಗ್ರೆಸ್ಸಿನ ನಿರೋಧ

ಬೆನಾರಸ್ ವಿಶ್ವವಿದ್ಯಾನಿಲಯದ ಸೇವಕರು ತಮ್ಮ ನ್ಯಾಯವಾರ ಬೇಡಿಕೆಗಳಿಗಾಗಿ ಮುಷ್ಕರದ ಹೂಡಿದರು. ಅಲ್ಲಿನ ವಿದ್ಯಾರ್ಥಿ ಕಾಂಗ್ರೆಸ್ಸಿನವರು ಅಧಿಕಾರಿಗಳೊಡನೆ ಸೇರಿಕೊಂಡು ಮುಷ್ಕರ ಮುರಿಯಲೆತ್ನಿಸಿದರು. (ಬಿ)

ಪತ್ರಿಕೋದ್ಯೋಗಿಗಳ ಸಮ್ಮೇಳನ

ಸ್ವಾಗತ ಸಮಿತಿ ಪ್ರಕಟಣಾ ಶಾಖಾಧಿಕಾರಿಗಳು ಈ ರೀತಿ ತಿಳಿಸಿದ್ದಾರೆ —

ಸಂಸ್ಥಾನದ ಪತ್ರಿಕೋದ್ಯೋಗಿಗಳ ನಾಲ್ಕನೇ ಮಹಾಸಮ್ಮೇಳನದ ಅಧ್ಯಕ್ಷತೆಯ ಉಮೇದುವಾರರ ಅಖೈರು ಪಟ್ಟಿ ಈ ರೀತಿ ಇರುತ್ತದೆ.—

(1) ಶ್ರೀಮತ್ ಎಂ. ಎಲ್. ಶ್ರೀಕಂಠಯ್ಯನವರು, ಸಂಪಾದಕರು 'ಮಾತೃಭೂಮಿ' ಬೆಂಗಳೂರು.

(2) ಶ್ರೀಮತ್ ಸಯ್ಯದ್ ಘೌಸ್ ಮೊಹಿಯುದ್ದೀನರು ಅಲ್ ಕಲಾಂ ಸಂಪಾದಕರು, ಬೆಂಗಳೂರು.

ಪ್ಲೂಟೋ – ಸಮುದ್ರದಲ್ಲಿಯೇ ಎಣ್ಣೆ ಸಾಗಿಸುವ ಕೊಳವೆ ಮಾರ್ಗ.

At Ranjit

ಪೃಥ್ವಿರಾಜ್, ಷಮೀಂ, ಮೋನಿಕಾ,
ದೇಶಾಯಿ, ಮುಂತಾದವರು
ನಟಿಸಿರುವ

— ಗೌರಿ —

(ಹಿಂದಿ)

27–12–45 ರಿಂದ ಪ್ರತಿದಿನ 3 ಆಟ
3-30, 6-30 ಮತ್ತು 9-45 ಕ್ಕೆ

ಚಿನ್ನಾ ಬೆಳ್ಳಿ ಧಾರಣೆ

ಸವರ್ನ 1 ಕ್ಕೆ	ರೂ. 57-8-0
ಚಿನ್ನ ತೊಲ 1 ಕ್ಕೆ	82-0-0
ಬೆಳ್ಳಿ	1-6-0

ಹಸಕ್ ಬೆಟ್ಟದಪುರದ
ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಶ್ಯ —

ಇಲ್ಲಿ ದೊರೆಯುತ್ತೆ
ರಾವಂದೂರ್ ವೀರಶೆಟ್ಟಿ & ಸನ್ಸ್
ಶಿವರಾಂಪೇಟೆ ಮೈಸೂರು.

AT Opera— 2 ನೇ ವಾರ

ತ್ಯಾಗರಾಜ ಭಾಗವತರ್ — ನಾಗಯ್ಯ — ಕನ್ನಾಂಬಾ
ಪಾತ್ರವಹಿಸಿರುವ

ಅಶೋಕ ಕುಮಾರ (ತಮಿಳು)

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘಸವಾದ್ದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯುನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಸಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

L. N. Press
Sriramp et MYSORE
For Good Printing

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ರಕ್ತವದಿಗೆ – ಧಾತುಪುಷ್ಟಿಗೆ ಸಂಜೀವನ

ಅಕ್ಕಿ ಸುಧಾ

ಬೆಲೆ ಡಬ್ಬಿ ೧ ಕ್ಕೆ ಒಂದು ರೂಪಾಯಿ

ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು